ಹೇಳುತ್ತಿರುತ್ತಿದ್ದಳು ಮೀನಾಕ್ಷಿ. ಆಚೆ ಕಿವಿಯಿಂದ ಕೇಳಿ ಈಚೆ ಕಿವಿಯಿಂದ ಬಿಡುವಷ್ಟು ಧೋರಣೆಯವನಲ್ಲದಿದ್ದರೂ ಅವಳು ಹೇಳಿದ್ದೆಲ್ಲಾ ಪೂರ್ತಿಯಾಗಿ ಜನಾರ್ದನನ ತಲೆಗೆ ಇಳಿದಿರಲಿಲ್ಲ ಎನ್ನುವ ಮಾತು ಸತ್ಯ.

★★★

ಎಲ್ಲಾ ಯಥಾಸಾವಕಾಶವಾಗಿ, ಸುಸೂತ್ರವಾಗಿ ನಡೆಯುತ್ತಿದೆ ಎನ್ನುವ ಭ್ರಮೆಯನ್ನುಂಟುಮಾಡಿ ಮನುಷ್ಯನ ಅಹಂ ಅನ್ನು ಪೋಷಿಸುತ್ತಲೇ ಇದ್ದಕ್ಕಿದ್ದಂತೆ ಧುತ್ತೆಂದು ಜೀರ್ಣಿಸಿಕೊಳ್ಳಲು ತಿಣುಕಾಡುವಂತಾ ಸಂಕಷ್ಟವನ್ನು ತಂದೊಡ್ಡುವುದು ವಿಧಿಯ ಲೀಲೆಯೇ? 'ಎಲ್ಲಾ ಸುಖವಾಗಿದ್ದರು, ಸಂತೋಷವಾಗಿದ್ದರು' ಎನ್ನುವಂತಾ ಅಂತ್ಯ ಕತೆಗಲ್ಲದೆ ಬದುಕಿಗೆ ಹೊಂದುವಂತಾದ್ದಲ್ಲವೇ? ಎಲ್ಲಾ ಸರಿಯಾಗಿದ್ದಿದ್ದರೆ ಇವತ್ತು ಜನಾರ್ದನನ ಸುಖಸಂತೋಷಕ್ಕೆ ಪಾರವೆಲ್ಲಿರುತ್ತಿತ್ತು? ಕಲ್ಪನೆಗೂ ಮೀರಿದ ರೀತಿಯಲ್ಲಿ ಬಂದೆರಗಿತ್ತು ಬರಸಿಡಿಲು. ಜನಾರ್ದನನನ್ನು ಕಂಗಾಲು ಮಾಡಿತ್ತು. ತನ್ನ ನಿಟ್ಟುಸಿರ ಧಗೆಯಲ್ಲಿ ತಾನೇ ಬೇಯುತ್ತಾ ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ವಿಲವಿಲನೆ ಒದ್ದಾಡುತ್ತಿದ್ದ ಜನಾರ್ದನ. ಕೈಯಾರೆ ಜೀವ ತೆಗೆದುಕೊಳ್ಳುವ ಯೋಚನೆ ಬಂದರೂ ಅದನ್ನು ಕಾರ್ಯರೂಪಕ್ಕೆ ತರಲಾಗದ ಸಂದಿಗ್ಧ. ಪಾಪಪ್ರಜ್ಞೆಯ ತೊಳಲಾಟ.

ಮಗಳು ನೇತ್ರನ ಹೆರಿಗೆ ಅನ್ನುವುದು ತೊಟ್ಟು ಕಳಚಿ ಹಣ್ಣು ಉದುರಿದಂತೆ ಸುಖರೂಪವಾಗಿ ನೆರವೇರಿ ಗಂಡ, ಹೆಂಡಿರನ್ನು ಸುಖದ ಶಿಖರಾಗ್ರಕ್ಕೆ ತಲುಪಿಸಿತ್ತು. ಅದ್ಯಾವ್ಯಾವ ದೇವರಿಗೆ ಅದೆಷ್ಟೆಷ್ಟು ಹರಕೆ ಹೇಳಿಕೊಂಡಿದ್ದರೋ ಎಲ್ಲವನ್ನೂ ಶ್ರದ್ಧಾಭಕ್ತಿಗಳಿಂದ ನೆರವೇರಿಸಿ ಕೃತಾರ್ಥನಾಗಿದ್ದ ಜನಾರ್ದನ. ಸಮುದ್ರದ ಅಲೆಗಳು ಉಕ್ಕುಕ್ಕಿ ಬರುವಂತೆ ಮನಸ್ಸಲ್ಲಿ ಸದಾ ಒಂದು ರೀತಿಯ ಸುಖದ ಹೆದ್ದೆರೆಗಳ ಭೋರ್ಗರೆತ. ಮೂರನೇ ತಿಂಗಳಲ್ಲಿ ಬಾಣಂತಿ ಮಗಳನ್ನು ಮೊಮ್ಮಗನ ಸಮೇತ ಮನೆಗೆ ಕರೆದುಕೊಂಡು ಬಂದಿದ್ದ ಜನಾರ್ದನ. ಆಚೀಚಿನ ಮನೆಯ ಹೆಂಗಳೆಯರು ಕದಲಾರತಿ ಮಾಡಿ ಮಗು, ಬಾಣಂತಿಯನ್ನು ಸ್ವಾಗತಿಸಿದ್ದರು. ಮೊನ್ನೆ ಮೊನ್ನೆ ಎಂಬಂತೆ ತೊಡೆಯ ಮೇಲಾಡುತ್ತಿದ್ದ ಮಗಳ ತೊಡೆಯ ಮೇಲೆ ಇನ್ನೊಂದು ಮಗು. 'ಮರದಲ್ಲಿ ಮರ ಹುಟ್ಟಿ, ಭೂಚಕ್ರ ಕಾಯಾಗಿ, ತಿನ್ನಲಾಗದ ಹಣ್ಣು ಬಲು ರುಚಿ'. ವಾತ್ಸಲ್ಯರಸದಲ್ಲಿ ಅದ್ದಿಟ್ಟಂತವನಾಗಿದ್ದ ಜನಾರ್ದನ ಮಗುವನ್ನು ಎತ್ತಿ ಎದೆಗವಚಿಕೊಳ್ಳಲು ತಹತಹಿಸಿದರೆ ಮಗಳು ಎಚ್ಚರಿಕೆ ಹೇಳುತ್ತಾಳೆ,

"ಹುಷಾರು ಅಪ್ಪಾ, ಇನ್ನೂ ತಲೆ ನಿಂತಿಲ್ಲ..."

ಪ್ರಥಮಾಂಗವನ್ನು ಅಹಂಕಾರಕ್ಕೂ ಜೋಡಣೆ ಮಾಡಿ ಹೋಲಿಸುವರಲ್ಲವೇ? ಜಂಭ ಬಂದಿತ್ತೇ ಜನಾರ್ದನನಿಗೆ? ಕೋಡು?

ಯಾಕೋ ಸಪ್ಪಗಿದ್ದಳು ಮೀನಾಕ್ಷಿ. ಅಕ್ಷಿಗಳ ಸುತ್ತಾ ಕಪ್ಪು ತಿರುಗಿ, ನಡಿಗೆಯಲ್ಲಿ ಜಡತ್ವ. ಆಲಸ್ಯ. ಇಪ್ಪತ್ತೈದು ವರ್ಷಗಳಿಂದ ನೋಡಿದ ಜನಾರ್ದನನ ಕಣ್ಣುಗಳಿಗೆ ಹೆಂಡತಿಯ ಬದಲಾವಣೆ ಅರಿವಾಗದೆ ಇರಲು ಸಾಧ್ಯವೇ? "ಯಾಕೇ? ಹುಷಾರಿಲ್ಲನೇ? ಒಂಥರಾ ಇದ್ದಿ?" ಹೊರಡುವಾಗ ಇದೇ ಪ್ರಶ್ನೆ ಕೇಳಿದ್ದು ಅವನಿಗೆ ಥಟ್ಟನೆ ನೆನಪಾಗಿತ್ತು. ಹೇಗೋ ಮಗಳ ಬಾಣಂತನ ಪೂರೈಸಿ ಅವಳನ್ನು ಗಂಡನ ಮನೆಗೆ ಕಳಿಸಿಬಿಟ್ಟರೆ ಆಮೇಲೇನಿದೆ ಜವಾಬ್ದಾರಿ? ಈಗಾಗಲೇ ಅರ್ಧ ಬಾಣಂತನ ಮುಗಿದ ಲೆಕ್ಕ. ಮನಸ್ಸು ಗರಿಹಗುರವಾದಂತೆ ನಿರಾಳ. ಸಮಯ ಸಾಧಿಸಿ ಗಂಡನ ಕಿವಿಯಲ್ಲಿ ಪಿಸುಗುಟ್ಟಿದ್ದಳು ಮೀನಾಕ್ಷಿ,